

## ಕಲರ್‌ಫುಲ್ ‘ಅಯೋಗ್ಯ’

ನೀನಾಸಂ ಸತೀಶ್ ಕನ್ನಡ ಚಿತ್ರರಂಗದ ಪ್ರತಿಭಾವಂತ ನಟರಲ್ಲೊಬ್ಬರು. ಅವರ ನಟನೆಯ ‘ಅಯೋಗ್ಯ’ ಚಿತ್ರ ಈಗ ಚಿತ್ರಮಂದಿರಗಳ ಹೊಸ್ತಿಲಲ್ಲಿದೆ (ಆ. 17ರಂದು ತೆರೆಗೆ).

‘ಅಯೋಗ್ಯ’ ಎನ್ನುವ ನಕಾರಾತ್ಮಕ ಹೆಸರಿನ ಚಿತ್ರದಲ್ಲಿ ಸತೀಶ್‌ರ ಪಾತ್ರ ಕಲರ್‌ಫುಲ್ ಆಗಿದೆಯಂತೆ. ತನ್ನ ಉಡಾಫೆ ಮನೋಭಾವದಿಂದಾಗಿ ನಾಯಕ ಊರಲ್ಲಿ ಎಲ್ಲರಿಂದಲೂ ಅಯೋಗ್ಯ ಎಂದು ಕರೆಸಿಕೊಳ್ಳುತ್ತಾನೆ. ಈ ಅಯೋಗ್ಯ ಗ್ರಾಮ ಪಂಚಾಯತಿ ಚುನಾವಣೆಯಲ್ಲಿ ಆಯ್ಕೆಯಾಗಿ ಊರಿಗೊಂದು ದಿಕ್ಕು ಕಾಣಿಸುವುದು ಚಿತ್ರದ ಕಥೆ. ಸತೀಶ್‌ಗೆ ಜೋಡಿಯಾಗಿ ರಚಿತಾ ರಾಮ್ ನಟಿಸಿದ್ದಾರೆ.

ನಿರ್ದೇಶನ ಮಹೇಶ್ ರಾವ್ ಅವರದ್ದು. ಸದಭಿರುಚಿಯ ಚಿತ್ರಗಳಿಗೆ ಹಾಗೂ ಲವಲವಿಕೆಯ ನಿರ್ದೇಶನಕ್ಕೆ ಹೆಸರಾದ ಮಹೇಶ್, ಗ್ರಾಮೀಣ ಸೊಗಡಿನ ಕಥೆಯನ್ನು ನಿರೂಪಿಸುವ ಸವಾಲಿಗೆ ಮುಖಾಮುಖಿಯಾಗಿದ್ದಾರೆ. ಅರ್ಜುನ್ ಜನ್ಯ ಸಂಗೀತ ಸಂಯೋಜನೆಯ ಗೀತೆಗಳು ಈಗಾಗಲೇ ಸಹೃದಯರ ಮೆಚ್ಚುಗೆಗೆ ಪಾತ್ರವಾಗಿರುವುದು ಕೂಡ ಚಿತ್ರತಂಡದ ಉತ್ಸಾಹಕ್ಕೆ ಕಾರಣವಾಗಿದೆ. ಚಿತ್ರದ ಹಿಂದಿ ಭಾಷೆಯ ಡಬ್ಬಿಂಗ್ ಹಕ್ಕುಗಳು ಭಾರೀ ಮೊತ್ತಕ್ಕೆ ಮಾರಾಟವಾಗಿರುವುದು ನಿರ್ಮಾಪಕರ ಉತ್ಸಾಹವನ್ನು ಮತ್ತಷ್ಟು ಹೆಚ್ಚಿಸಿದೆ.



## ಹಳೆಯ ಹಳಿಗೆ ದೇಸಾಯಿ

‘ರೇ’ ಸಿನಿಮಾದ ನಂತರ ಬಿಡುವು ತೆಗೆದುಕೊಂಡಿದ್ದ ನಿರ್ದೇಶಕ ಸುನೀಲ್‌ಕುಮಾರ್ ದೇಸಾಯಿ ಸದ್ದಿಲ್ಲದೆ ಹೊಸ ಚಿತ್ರದ ಚಿತ್ರೀಕರಣ ಮುಗಿಸಿದ್ದಾರೆ. ಚಿತ್ರದ ಹೆಸರು ‘ಉದ್ಘರ್ಷ’. ಶೀರ್ಷಿಕೆ ಕೇಳಿದಾಕ್ಷಣ ಇದು ಪಕ್ಕಾ ದೇಸಾಯಿ ಶೈಲಿಯ ಸಿನಿಮಾ ಎನ್ನುವುದನ್ನು ಚಿತ್ರರಸಿಕರು ಸುಲಭವಾಗಿ ಊಹಿಸಬಹುದು.

‘ತರ್ಕ’, ‘ಉತ್ಕರ್ಷ’, ‘ನಿಷ್ಕರ್ಷ’, ‘ಪ್ರತ್ಯರ್ಥ’ ರೀತಿಯ ಸಿನಿಮಾಗಳನ್ನು ಮಾಡಿದ ದೇಸಾಯಿ ಮತ್ತೊಮ್ಮೆ ಸಸ್ಪೆನ್ಸ್ ಥ್ರಿಲ್ಲರ್ ಕಥನಕ್ಕೆ ಮರಳಿದ್ದಾರೆ. ಕನ್ನಡ ಮಾತ್ರವಲ್ಲದೆ ತೆಲುಗು, ತಮಿಳು, ಮಲಯಾಳಂಗಳಲ್ಲಿ ಕೂಡ ದೇಸಾಯಿ ಸಿನಿಮಾ ತೆರೆ ಕಾಣಲು ಸಿದ್ಧತೆ ನಡೆಸುತ್ತಿದೆ. ದಕ್ಷಿಣ ಭಾರತದ ಪ್ಯಾಕೇಜ್‌ಗೆ ತಕ್ಕಂತೆ ಚಿತ್ರದ ತಾರಾಗಣವೂ ಇದೆ. ತಮಿಳಿನ ‘ಸಿಂಗಂ 3’ ಖ್ಯಾತಿಯ ಅನೂಪ್ ಸಿಂಗ್ ಮುಖ್ಯಪಾತ್ರದಲ್ಲಿ ನಟಿಸಿದ್ದಾರೆ. ‘ಕಬಾಲಿ’ ಚಿತ್ರದಲ್ಲಿ ನಟಿಸಿದ್ದ ಧನ್ಸಿಕಾ ಚಿತ್ರದ ನಾಯಕಿ.

ತಾನ್ಯಾ ಹೋಪ್ ಎನ್ನುವ ಬಹುಭಾಷಾ ನಟಿ ಮುಖ್ಯಪಾತ್ರವೊಂದರಲ್ಲಿ ನಟಿಸಿದ್ದಾರೆ. ಇವರ ಜೊತೆಗೆ ಕನ್ನಡದ ಹರ್ಷಿಕಾ ಪೂಣಚ್ಚ ವಿಶೇಷ ಪಾತ್ರವೊಂದರಲ್ಲಿ ಕಾಣಿಸಿಕೊಂಡಿದ್ದಾರೆ. ಅವರ ಪಾತ್ರ ವಿಭಿನ್ನವಾಗಿಯೂ ಸಾಕಷ್ಟು ಬೋಲ್ಡ್ ಆಗಿಯೂ ಇದೆಯಂತೆ.

ಸಂಜಯ್ ಚೌಧರಿ ಸಂಗೀತ ಚಿತ್ರಕ್ಕಿದೆ. ‘ಬೇಬಿ’, ‘ಎಂ.ಎಸ್. ಧೋನಿ – ದ ಅನ್‌ಟೋಲ್ಡ್ ಸ್ಟೋರಿ’ ಸಿನಿಮಾಗಳಿಗೆ ಸಂಗೀತ ಸಂಯೋಜಿಸಿರುವ ಸಂಜಯ್ ‘ಉದ್ಘರ್ಷ’ ಮೂಲಕ ಕನ್ನಡಕ್ಕೆ ಬರುತ್ತಿದ್ದಾರೆ. ವಿಷ್ಣುವರ್ಧನ್–ರಾಜನ್ ಛಾಯಾಗ್ರಹಣ ಹಾಗೂ ರವಿವರ್ಮ ಅವರ ಸಾಹಸ ಸಂಯೋಜನೆ ಚಿತ್ರಕ್ಕಿದೆ.